# ಕಂಡೆ ಕಂಡೆ ಕಂಡೆನಯ್ಯಾ ಕಂಗಳ ದಣಿಯುವ ತನಕ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi. The wordings here are totally different. They are not mentioned here.
4. **Note:** The wordings are fully matching in both the books and also with the singer.

ರಾಗ ನಾದನಾಮಕ್ರಿಯೆ ತಾಳ ಏಕ

ಕಂಡೆ ಕಂಡೆ ಕಂಡೆನಯ್ಯಾ ಕಂಗಳ ದಣಿಯುವ ತನಕ
ಮಂಗಳ ಮೂರುತಿ ಮನ್ನಾರು ಕೃಷ್ಣನ ಕಂಡೆ ॥ ಪ ॥

ಉಟ್ಟ ಪೀತಾಂಬರ ಕಂಡೆ ತೊಟ್ಟ ವಜ್ರದಂಗಿ ಕಂಡೆ
ದಕ್ಷಿಣದ ದ್ವಾರಕಿ ಮನ್ನಾರು ಕೃಷ್ಣನ ಕಂಡೆ ॥ 1 ॥

ಕಡೆವ ಕಡೆಗೋಲ ಕಂಡೆ ನಡುವಿನೊಡ್ಯಾಣ ಕಂಡೆ
ಕಡು ಮುದ್ದು ಮನ್ನಾರು ಕೃಷ್ಣನ ಕಂಡೆ ॥ 2 ॥

ದೇವಕಿ ದೇವಿಯರ ಕಂಡೆ ಗೋಪಿಯರ ಮುದ್ದಾಟ ಕಂಡೆ
ಮಾವ ಕಂಸನ ಮರ್ದನನ ಶ್ರೀ ಕೃಷ್ಣನ ಕಂಡೆ ॥ 3 ॥

ಆಕಳ ಕಾವುದ ಕಂಡೆ ಗೋಪಾಲಕೃಷ್ಣನ ಕಂಡೆ
ವೈಕುಂಠ ವಾಸನ ಮನ್ನಾರು ಕೃಷ್ಣನ ಕಂಡೆ ॥ 4 ॥

ಶೇಷನ ಹಾಸಿಗೆಯ ಕಂಡೆ ಸಾಸಿರ ನಾಮನ ಕಂಡೆ
ಶ್ರೀಶ ಪುರಂದರ ವಿಠಲ ಕೃಷ್ಣರಾಯನ ಕಂಡೆ ॥ 5 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ದಕ್ಷಿಣದ ದ್ವಾರಕಿ** – ಮನ್ನಾರು ಗುಡಿಯಲ್ಲಿ ರಾಜಗೋಪಾಲ ಸ್ವಾಮಿ ದ್ವಾರಕಾಧೀಶನೆಂದೇ ಪ್ರತೀತಿ. ಈ ಕ್ಷೇತ್ರಕ್ಕೆ 'ದಕ್ಷಿಣ ದ್ವಾರಕೆ'ಯೆಂದು ಹೆಸರಿದೆ. ಇಲ್ಲಿನ ಆರ್ಚಾವತಾರವನ್ನು ವಾಸುದೇವನೆಂದು ನಿರ್ದೇಶಿಸುತ್ತಾರೆ. ಉಭಯನಾಚ್ಚಿ

ಯಾರರಿಂದ (ಶ್ರೀದೇವಿ, ಭೂದೇವಿ) ಕೂಡಿದ ಈ ಮೂರ್ತಿ ತುಮಬ ಮೋಹಕವಾಗಿದೆ; 'ಕಡು ಮುದ್ದು,' ಆದರೆ ಇಲ್ಲಿ ಬಂದಿರುವ ವರ್ಣನೆ ಸಾಮಾನ್ಯವಾಗಿ ಕೃಷ್ಣನ ವರ್ಣನೆಯೇ; ಮನ್ನಾರು ಗುಡಿಯ ರಾಜಗೋಪಾಲ ಸ್ವಾಮಿಯದೇ ಅಲ್ಲ.

**ದೇವಕಿ** = ಉಗ್ರಸೇನನ ತಮ್ಮನಾದ ದೇವಕನ ಮಗಳು, ಕಂಸನ ತಂಗಿ, ವಸುದೇವನ ಹೆಂಡತಿ, ಕೃಷ್ಣನ ತಾಯಿ

**ಸಾಸಿರ ನಾಮ** = ವಿಷ್ಣುವಿಗೆ ಸಾವಿರ ಹೆಸರುಗಳಿವೆ

**ಕಾವು** = ದಂಡ, ಉಕ್ಕಿನ ಆಯುಧಗಳಿಗೆ ಹಿಡಿಸುವ ಹದ

**Classification:** Keerthane
**Ankita:** srisha purandara vittala
**Location:** Mannaru Gudi, near Tanjavoor, Tamil Nadu. The temple is of Raja Gopala Krishna. In Gopala murthy there are three types: Venugopala, Rajagopala, Madanagopala. This Rajagopala is holding whip one hand and a stick in the other hand. The murthy is very beautiful and is special. Hence, Purandara Dasa has specifically mentions: "turugala kaida…" in the song "mannAru krishNage mangaLa…"
**Category:** Krishna Stuti, Vishnu Aradhane
**Sub-Category:** kannu, mangala, vajra, dwaraka, Devaki, devi, gopi, kamsa, govu, Gopala, vaikunta, shesha, hasige, Krishna, mannaru, vastra, abharana,
**Pravachana:** NA
**Explanation:** NA